# ಸೀಮಿಗೊಂದ ಆಟಾಟಿ...

■ ಡಿ.ಎಸ್. ಚೌಗಲೆ
ಚಿತ್ರಗಳು: ಕಲ್ಲೇಶ್ ಕುಂಬಾರ್



ಮಹಾದೇವನ ಅವ್ವ ಪಾರವ್ವನ ಒಂದೊಂದು ಮಾತುಗಳು ಬುಲೆಟ್‌ನಂತೆ ಸಿಡಿದು ದೇಹ ಮನಸ್ಸನ್ನು ಧ್ವಂಸಗೊಳಿಸುತ್ತಿದ್ದವು. ಕಿವಿಗಂಟಿದ ಎಂಡ್ರಾಯಡ್ ಮೊಬೈಲ್ ಬಿಸಿಯಾಗಿ ಮಹಾದೇವನ ಕಿವಿ ತಮಟೆಯನ್ನು ಸುಡುತ್ತಲಿತ್ತು. ಆ ನುಡಿಗಳಲ್ಲಿ ವಾಸ್ತವದ ಲಾವಾದಂತಿರುವ ಹರಿವು ಇತ್ತು. ಕಾದ ಸೀಸವನ್ನು ಕಿವಿಗೆ ಸುರಿದಂತೆ ಪಾರವ್ವ ''ಒಂದ್ ಮಾತ ಹೇಳತ್ಯಾನ ಕೇಳ, ಛಲೋದಂಗ ಕೇಳ್..'' ಹೇಳಲು ಅನುವಾದಳು. ಇತ್ತ ಮಹಾದೇವ, ಹಾಂ.. ಹೇಳ್.. ಎಂದು 'ಹೂಂ'ಗುಟ್ಟಹತ್ತಿದ. 'ನಿಮ್ಮಪ್ಪ ಸಾಂಗಲಿ ಪ್ಯಾಟಿಗಿ ಬೆಲ್ಲದ ರೊಕ್ಕ ತರಾಕ ಹೊಂಟಿದ್ದ. ಮುದುಕಿ ಹಾಸಿಗಿ ಹಿಡಿದಿತ್ತು. 'ನನಗ ಜರಾ ಡಾಗ್‌ಟಾರಿಗಿ (ವೈದ್ಯ) ತೋರಿಸಿ ಹೋಗು.. ಬರೋದ ತಡಾ ಆದೀತು..' ಮುದುಕಿ ಅಂದಿತು. ಗೋಗರಿತು. ಹುಂಬಗುತ್ತಿಗಿ ನಿಮ್ಮಪ್ಪ ಕಾಣಸಾ ಮನಸಾ ಮಾಡಿ ಬೆಲ್ಲದ ರೊಕ್ಕ ತರಾಕ ಸಾಂಗಲಿಗಿ ಹ್ವಾದ ಹೊರತು ಮುದುಕಿಗಿ ತೋರಿಸಲಿಲ್ಲ. ರೊಕ್ಕ ತಗೊಂಡು ಬರೋತನಕ ಮುದುಕಿ ಹಾಸಿಗ್ಯಾಗ ತಣ್ಣಗ ಮಲಗಿದ್ದು. ಕೈಯಾಗ ರೊಕ್ಕ ಮತ್ತ ಸಿಹಿ ಪುಡಿಕೆ ಹಿಡಿಕೊಂಡ ಗೊಳೋ ಅಂತ ಅಳಾಕತ್ತಿದ ನಿಮ್ಮಪ್ಪ. ಕಾಲ ಶಿವನ ಪಾದ ಸೇರಿತ್ತು. ಹಂಗ ನೀವ್ ನನಗ ಮಾಡಬ್ಯಾಡ್ರಿ.. ಹಡದವ್ವನ ಈ ಗೋಗರೆವಿಕೆ ದೇಹವನ್ನೇ ಬರ್ಫ ಆಗಿಸಿತ್ತು. ಕೆಲಕ್ಷಣ ಕಣ್ಣತ್ತಲಿ ಬಂದಂತಾಯಿತು ಮಹಾದೇವಗ. ಎಂಬತ್ತು ಹತ್ತಿರ ಹತ್ತಿರ ವಯಸ್ಸಾದ ಅವ್ವ ಹಲವಾರು ಕಾಯಿಲೆಯಿಂದ ಹಣ್ಣಾಗಿದ್ದಳು. ಮುಖ್ಯವಾಗಿ ನರಸಂಬಂಧಿ ರೋಗವು ಅವಳ ಕಾಲುಗಳ ಶಕ್ತಿಯನ್ನು ಉಡುಗಿಸಿದ್ದರೂ ಬದುಕಿನ ಉಲ್ಲಾಸ–ಉತ್ಸಾಹವನ್ನು ಕಸಿದಿರಲಿಲ್ಲ.

ಕಳೆದ ದಶಕಕ್ಕೂ ಅಧಿಕ ಸಮಯ ಹಾಸಿಗೆ ಕೋಣೆಯಲ್ಲಿ ಕಳೆಯುತ್ತಿದ್ದಳು. ಸಂಗಾತಿಯಾಗಿ ಹಳೆಯ ಟೀವಿ, ಟೇಬಲ್ ಫ್ಯಾನು ಮತ್ತು ಹಗಲು ಹೊತ್ತು ಕರಿಹೆಂಚಿನ ರಂಧ್ರಗಳಿಂದ ಬರುವ ಬಿಸಿಲುಕೋಲುಗಳು. ಬಿಸಿಲುಕೋಲುಗಳಲ್ಲಿ ಹಬೆಯಾಡುತ್ತಿರುವ ಚಲನದಲ್ಲಿ ಒಮ್ಮೊಮ್ಮಿ ಗತ ಬದುಕಿನ ಬಿಂಬಗಳು ಚಿತ್ರವಾಗಿ ಆಕೆಯನ್ನು ಸಂಭ್ರಮ ಮತ್ತು ವಿಷಾದದಲ್ಲಿ ಅದ್ದಿ ತೆಗೆಯುತ್ತಿದ್ದವು. ಒಬ್ಬಳೇ, ಆ ಕೋಣೆ ಜತೆಗೆ ಮೊಬೈಲ್‌ನಿಂದ ಹೊರ ಪ್ರಪಂಚದ ಸಂಪರ್ಕ. ಒಂದು ರೀತಿ 'ಏಕಟಾ ಜೀವಸದಾಶಿವ' ಎಂಬಂತಿರುವ ಸ್ಥಿತಿ. ಅವಳಿಗೆ ಆರೋಗ್ಯ ಏರುಪೇರು ಆಗತಿದೆ ಎಂದು ಅನುಭವಕ್ಕೆ ಬಂದಾಗ ಮಹಾದೇವಗ ಇಲ್ಲ ರಾಜೀವಗ ಫೋನ್ ಹಚ್ಚಿ, ''ನಂಗ ಈಚಲಕರಂಜಿ ದೊಡ್ಡ ದವಾಖಾನಿಗಿ ತೋರಿಸರ್ಯೋ. ನನಗ ಹೆಂಗೆಂಗಾರ ಆಗಾಕ ಹತ್ತೇತಿ. ನಿಮ್ಮಪ್ಪ ಮಾಡಿದಂಗ ಮಾಡೇರಿ...'' ಅಂತಿದ್ದಳು. ಆಕೆ ಹೀಗೆ ಉಸಿರದಾಗೆಲ್ಲ ಮಹಾದೇವನ ಎದೆಗೆ ತಿವಿದಂಗ ಆಗುತ್ತಿತ್ತು. ಹಲವು ಸಾರೆ ತನ್ನ ಕಾರ್ಯಗಳ ಬದಿಗೊತ್ತಿ ಧಾವಂತದಲ್ಲಿ ಹೋಗಿ ತೋರಿಸಿ ಬರುತ್ತಿದ್ದ. ಉಳಿದವರು ತಮಗೂ ಇದಕೂ ಎಳ್ಳಕಾಳ ಮುಳ್ಳಮೊನಿಯಷ್ಟೂ ಸಂಬಂಧವೇ ಇಲ್ಲದಂತೆ ತಮ್ಮ ಬದುಕಲ್ಲಿ ತಲ್ಲೀನರಾಗಿರುತ್ತಿದ್ದರು. ಅಥವಾ ಬದುಕಿನ ವಿನ್ಯಾಸವೆ ಪಲ್ಲಟಗೊಂಡಿದೆಯೇನೋ! ಕೆಲಸ ಉದ್ಯೋಗಗಳ ಭರಾಟೆಗಳು, ಸಂತೋಷಕೂಟಗಳು ಹಾಗೂ ಗಳಿಕೆಯ ನೂರೆಂಟು ಮಜಲುಗಳಲ್ಲಿ ಮನುಷ್ಯ ಕಳೆದುಹೋಗಿದ್ದಾನೆ ಎಂದು ಮಹಾದೇವಗೆ ಅನಿಸುತ್ತಿತ್ತು.

ಮಂಚದ ಮೇಲೆ ಒಬ್ಬಳೇ ಕುಳಿತಿದ್ದಳು. ಫಿಜಿಯೋಥೆರಪಿಯವರು ಹೇಳಿಕೊಟ್ಟ ವ್ಯಾಯಾಮ ಮಾಡುತ್ತಿದ್ದಳು. ಮಧ್ಯಾಹ್ನದ ಭರ್ರ ಬಿಸಿಲೊಳಗೂ ತಂಪೆರೆಸುವ